ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

ಸಂಖ್ಯೆ: ಇಡಿ/ಕೆಇಎ/ ಪಿಜಿ ವೈದ್ಯಕೀಯ ಮಾಪ್ ಅಪ್/2021 ದಿನಾಂಕ: 22-04-2022

**ಪಿಜಿ ವೈದ್ಯಕೀಯ ಕೋರ್ಸುಗಳಿಗೆ ಮಾಪ್ಅಪ್ ಸುತ್ತು – 2021**

ಪಿಜಿ ವೈದ್ಯಕೀಯ ಕೌನ್ಸಿಲಿಂಗ್ ಅನ್ನು ದಿನಾಂಕ 27-04-2022 ಮತ್ತು 28-04-2022 ರಂದು ನಡೆಸಲಾಗುವುದು.

1. ಅಖಿಲ ಭಾರತ ಕೌನ್ಸಿಲಿಂಗ್‌ನ ಮೊದಲನೇ / ಎರಡನೇ ಸುತ್ತಿನಲ್ಲಿ ಅಥವಾ ವಿಶೇಷ ಸುತ್ತಿನಲ್ಲಿ ಅಥವಾ ಡೀಮ್ಡ್ ವಿಶ್ವವಿದ್ಯಾಲಯಗಳ ಕೌನ್ಸಿಲಿಂಗ್‌ನಲ್ಲಿ ಕಾಲೇಜುಗಳಿಗೆ ಸೇರಿಕೊಂಡವರು ಅಥವಾ ಪ್ರಸ್ತುತ ಅಖಿಲ ಭಾರತ ಕೌನ್ಸಿಲಿಂಗ್‌ನ ಮಾಪ್ ಅಪ್ ಸುತ್ತಿನಲ್ಲಿ ಸೀಟು ಹಂಚಿಕೆ ಮಾಡಿಕೊಂಡಿರುವವರು ರಾಜ್ಯದ ಪಿಜಿ ವೈದ್ಯಕೀಯ ಮಾಪ್ ಅಪ್ ಸುತ್ತಿನಲ್ಲಿ ಭಾಗವಹಿಸಲು ಅರ್ಹರಿರುವುದಿಲ್ಲ.
2. ರಾಜ್ಯದ ಎರಡನೇ ಸುತ್ತಿನ ಸೀಟು ಹಂಚಿಕೆಯಲ್ಲಿ *ಕ್ಲಿನಿಕಲ್ ಸೀಟು ಹಂಚಿಕೆಯಾಗದಿರುವವರು ಪಿಜಿ ವೈದ್ಯಕೀಯ ಮಾಪ್ ಅಪ್ ಸುತ್ತಿನಲ್ಲಿ ಭಾಗವಹಿಸಲು ಅರ್ಹರಿರುತ್ತಾರೆ.
3. ಪ್ರಿ ಅಥವಾ ಪ್ಯಾರಾ ಕ್ಲಿನಿಕಲ್ ಸೀಟನ್ನು ಪಡೆದವರು ಕ್ಲಿನಿಕಲ್ ಸೀಟು ಹಂಚಿಕೆಗೆ ಮಾತ್ರ ಈ ಮಾಪ್ ಅಪ್ ಸುತ್ತಿನಲ್ಲಿ ಭಾಗವಹಿಸಬಹುದು. ಆದರೆ ಅಂತಹ ಅಭ್ಯರ್ಥಿಗಳು ಕಾಲೇಜಿನಲ್ಲಿ ಪ್ರವೇಶ ಪಡೆದಿದ್ದಲ್ಲಿ ಈ ಮಾಪ್ ಅಪ್ ಸುತ್ತಿನಲ್ಲಿ ಭಾಗವಹಿಸಲು ಅರ್ಹರಿರುವುದಿಲ್ಲ.
4. ಅಖಿಲ ಭಾರತ ಮಾಪ್ ಅಪ್ ಸುತ್ತಿನಲ್ಲಿ ಸೀಟು ಹಂಚಿಕೆಯಾಗದಿದ್ದಲ್ಲಿ ಎಲ್ಲಾ ಮೂಲ ದಾಖಲೆಗಳನ್ನು ಸಲ್ಲಿಸಿ ರಾಜ್ಯದ ಮಾಪ್ ಅಪ್ ಸುತ್ತಿನಲ್ಲಿ ಭಾಗವಹಿಸಬಹುದು. (ವೇಳಾಪಟ್ಟಿಗಾಗಿ ಪ್ರಾಧಿಕಾರದ ವೆಬ್‌ಸೈಟನ್ನು ನೋಡುವುದು)
5. ಪಿಜಿ ವೈದ್ಯಕೀಯ ಮಾಪ್ ಅಪ್ ಸುತ್ತಿನ ಸೀಟು ಹಂಚಿಕೆಯನ್ನು ದಿನಾಂಕ 27-04-2022 ಮತ್ತು 28-04-2022 ರಂದು ನಡೆಸಲಾಗುವುದು, ರ್‍ಯಾಂಕ್‌ವೈಸ್ ವೇಳಾಪಟ್ಟಿಯನ್ನು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಸದ್ಯದಲ್ಲಿಯೇ ಪ್ರಕಟಿಸಲಾಗುವುದು.
6. ಅರ್ಹ ಅಭ್ಯರ್ಥಿಗಳು ಮಾಪ್ ಅಪ್ ಸುತ್ತಿನ ಸೀಟು ಹಂಚಿಕೆಯಲ್ಲಿ ಭಾಗವಹಿಸಲು ಸಲ್ಲಿಸಬೇಕಾದ ದಾಖಲೆಗಳು, ಡಿಮ್ಯಾಂಡ್ ಡ್ರಾಫ್ಟ್‌ಗಳ ಮೂಲಕ ಶುಲ್ಕ ಪಾವತಿ ಮಾಡುವ ಬಗ್ಗೆ ಹಾಗು ಇತರೆ ವಿವರಣೆಗಾಗಿ ದಿನಾಂಕ 25-03-2022 ರ ಕೆಇಎ ವೆಬ್‌ಸೈಟನಲ್ಲಿರುವ ಪ್ರಕಟಣೆಯನ್ನು ಓದಿಕೊಳ್ಳಲು ಸೂಚಿಸಿದೆ.

ಮುಖ್ಯವಾದುದು: ಬ್ಯಾಂಕ್ ರಜಾದಿನಗಳನ್ನು ಅಥವಾ ಬ್ಯಾಂಕುಗಳ ವ್ಯವಹಾರದ ದಿನಗಳನ್ನು ಗಮನದಲ್ಲಿಟ್ಟುಕೊಂಡು ಅಭ್ಯರ್ಥಿಗಳು ಮುಂಚಿತವಾಗಿಯೇ ಡಿಮ್ಯಾಂಡ್ ಡ್ರಾಫ್ಟ್‌ಗಳನ್ನು ತೆಗೆದಿಟ್ಟುಕೊಳ್ಳಲು ಸೂಚಿಸಿದೆ. ಡಿಮ್ಯಾಂಡ್ ಡ್ರಾಫ್ಟ್ ಇಲ್ಲದೇ ಇರುವ ಅಭ್ಯರ್ಥಿಗಳನ್ನು ಸೀಟು ಆಯ್ಕೆ ಮಾಡಲು ಅನುಮತಿಸಲಾಗುವುದಿಲ್ಲ. ನಿಗದಿತ ಶುಲ್ಕವನ್ನು ಚೆಕ್ ಮುಖಾಂತರ ಅಥವಾ ನಗದು ರೂಪದಲ್ಲಿ ಅಥವಾ ಆನ್‌ಲೈನ್ ಮುಖಾಂತರ ಪಾವತಿಸುವಂತಿಲ್ಲ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ **MOP-UP ROUND** ಸುತ್ತು ನಡೆಸಲಾಗುವುದು.

ಕಾರ್ಯನಿರ್ವಾಹಕ ನಿರ್ದೇಶಕರು.

**18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012**
18th Cross, Sampige Road, Malleshwaram, Bengaluru - 560 012.
Phone: 080 - 23 564 583, 23 460 460, 23 361 786, Fax: 080 - 23 461 576
e-mail : keauthority-ka@nic.in Website : http://kea.kar.nic.in